## 14

# ಯಾಬೇಷಿನ ನಾಗರೀಕರು

## ಕೃತಜ್ಞತೆಯ ನಿದರ್ಶನ
## (31:11-13)

ಟೆನೆಸಿಯ, ನಾಶವಿಲೆಯಲ್ಲಿನ ಒಬ್ಬ ಯೋಧನ ಸಮಾದಿಯ ಬಳಿ, ಇಲಿನೊಯ್ ಪಟ್ಟಣದ ಒಕ್ಕಲಿಗನೊಬ್ಬ ಮೊಣಕಾಲೂರಿರುವದು ಕಂಡು ಬಂದಿತು. ಆ ಯೋಧನು ಈತನ ಮಗನೋ, ಎಂದು ಪ್ರಶ್ನಿಸಿದಾಗ ಅವನು, "ಇಲ್ಲ" ಅವನು ನಮ್ಮ ಪಟ್ಟಣದಲ್ಲಿ ವಾಸಿಸುತ್ತಿದ್ದನು. ನಾನು ಅವನ ತಂದೆಯನ್ನು ಹುಡುಕಲು ಬಂದಿದ್ದೇನೆ ಎಂದುತ್ತರಿಸಿದನು. "ಬಹುಶಃ ಬರಲಾಗದೇ ಇರುವ ಅವನ ಸಮಾಧಿಯನ್ನು ಪ್ರತಿನಿಧಿಸಿ ನೀನು ಬಂದಿರುವೆಯಾ?" ಎಂದು ಗಮನಿಸಿದಾಗ, "ಹೌದು," "ಈ ಮನುಷ್ಯನ ತಂದೆಯು ನಾನು ಇಲ್ಲಿ ಬರುವದಕ್ಕೆ ಬಹಳ ಸಂತೋಷಿಸಿದರು, ಆದರೆ ನಾನು ನನಗಾಗಿ ಬಂದೆನು. ನನಗೆ ಏಳು ಚಿಕ್ಕ ಮಕ್ಕಳಿದ್ದಾರೆ. ನನ್ನ ಪತ್ನಿ ಅಸ್ವಸ್ತಳಾಗಿದ್ದಾಳೆ. ನನ್ನನ್ನು ಸೇನೆಗೆ ಆಯ್ಕೆ ಮಾಡಿದ್ದಾರೆ. ನನ್ನ ಹೊಲದಲ್ಲಿ ಬದಲಿಗೆ ಕೆಲಸಕ್ಕೆ ಇಟ್ಟು ಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ನನ್ನ ಹದಿಮೂರು ಡಾಲರ ಹಣ ನನ್ನ ಕುಟುಂಬವನ್ನು ಸಾಕುವದಕ್ಕಾಗದು. ನಾನು ಹೋಗಬೇಕು ಮತ್ತು ನನ್ನ ಕುಟುಂಬ ಕಷ್ಟಕ್ಕೊಳಗಾಗ ಬೇಕಾಗುವದು ಎಂದು ತೋಲಿತು. ನಾನು ಸೈನ್ಯದ ಕರ್ತವ್ಯಕ್ಕೆ ಸೇರುವ ಹಿಂದಿನ ದಿನವೇ. ನನ್ನ ನೆರೆ ಮನೆಯ ಮಗನು ಬಂದು, ನನ್ನ ಬದಲಾಗಿ ಯುದ್ಧಕ್ಕೆ ಹೋಗಲು ಒಪ್ಪಿಕೊಂಡನು ಅಂದನು. ತನ್ನ ಮೇಲೆ ಅವಲಂಭಿತರಾಗಿರುವವರು ಯಾರೂ ಇಲ್ಲದ್ದರಿಂದ, ತಾನು ಯುದ್ಧಕ್ಕೆ ಹೋಗಲು ಉತ್ತಮವಾದ ವ್ಯಕ್ತಿಯೆಂದು ಹೇಳಿದನು. ಅವನು ಸತ್ತನು. ಇದು ಅವನ ಸಮಾಧಿ." ಅದರ ಮೇಲಿನ ಕಲ್ಲಿನ ಮೇಲೆ ಆ ಒಕ್ಕಲಿಗನು, "ನನಗಾಗಿ ಸತ್ತನು" ಎಂದು ಬರೆದನು.

ಕೃತಜ್ಞತೆಯು, ದೇವರನ್ನು ಹಿಂಬಾಲಿಸುವವರ ನಿಕಟವಾದ ಗುರುತಾಗಿದೆ. ಕ್ರೈಸ್ತರಿಗೆ ಹೊಸ ಒಡಂಬಡಿಕೆಯಲ್ಲಿ ಅನೇಕ ಬಾರಿ ಕೃತಜ್ಞತೆಯುಳ್ಳವರಾಗಿರಬೇಕೆಂದು ಆಜ್ಞೆ ಕೊಡಲ್ಪಟ್ಟಿದೆ:

> ... ನೀವು ಒಂದೇ ದೇಹಕ್ಕೆ ಸೇರಿದವರಾದದರಿಂದ ಸಮಾಧಾನದಿಂದಿರು ವದಕ್ಕಾಗಿ ಕರೆಯಲ್ಪಟ್ಟಿರಿ (ಕೊಲೊಸ್ಸೆ 3:15ಬ).

> ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿ ಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋಲಿಬಂದ ದೇವರ ಚಿತ್ತವಾಗಿದೆ (1 ಥೆಸಲೋನಿಕ 5:18).

> ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗ ಳನ್ನೂ, ಪ್ರಾರ್ಥನೆಗಳನ್ನೂ, ಮನವೆಗಳನ್ನೂ ಕೃತಜ್ಞತಾಸ್ತುತಿಗಳನ್ನೂ ಮಾಡಬೇಕೆಂದು ಬೋ ಧಿಸುತ್ತೇನೆ (1 ತಿಮೋಥೆ 2:1).

ಈ ಸರಳವಾದ ಆಜ್ಞೆಗಳಿದ್ದಾಗಲೂ, ಕೃತಜ್ಞತೆಯ ಹೃದಯಗಳ ಕೊರತೆಯಿದೆ!

ಕೃತಜ್ಞತೆಯ ಭಾವವು ಯಾವಾಗಲೂ ಆನಂದವನ್ನುಂಟು ಮಾಡುತ್ತದೆ.

“ವಂದನೆಗಳು.” ಎಂಬ ಭಾವವು ನೋಡುವ ಎಲ್ಲರಿಗೂ ಆನಂದವನ್ನುಂಟು ಮಾಡುತ್ತದೆ. ಯಾಬೇಷ ಗಿಲ್ಯಾದಿನವರು ಈ ಭಾವವನ್ನು ತೋರ್ಪಡಿಸಿದರು ಮತ್ತು ಅವರ ಕೃತಜ್ಞತೆಯ ಭಾವವು 1 ಸಮುವೇಲವನ್ನು ಸಂಪೂರ್ಣಗೊಳಿಸುತ್ತದೆ.

ಯೋರ್ದನ್ ಹೊಳೆಯ ಪಶ್ಚಿಮ ದಿಕ್ಕಿನಲ್ಲಿ ಚಿಕ್ಕ ಪಟ್ಟಣವಾದ ಯಾಬೇಷ್ ನೆಲೆಸಿದೆ. ಬೆನ್ಯಾಮಿನರ ವಿರುದ್ಧ ದುಃಖಕರವಾದ ಯಾದವೀ ಕಲಹದಲ್ಲಿ ಭಾಗವಹಿಸದ ಇಸ್ರೇಲಿ ಪಟ್ಟಣಗಳಲ್ಲಿ ಒಂದಾಗಿದೆ (ನ್ಯಾಯಸ್ಥಾಪಕರು 20:13). ಆ ಕುಲವು ಸಂಪೂರ್ಣ ನಾಶ ವಾದ ತರುವಾಯ, ಬೆನ್ಯಾಮಿನ ಕುಲದ ಪುರುಷರಿಗೋಸ್ಕರ ಸ್ತ್ರೀಯರನ್ನು ಯಾಬೇಷಿನಿಂದ ತೆಗೆದುಕೊಂಡು ಹೋದರು (ನ್ಯಾಯಸ್ಥಾಪಕರು 21:8-15). ಹೀಗೆ ಬಹುಕಾಲದ ಮತ್ತು ನಿಕಟ ಸಂಬಂಧವು ಇಬ್ಬರ ಮಧ್ಯೆ ಬೆಳೆಯಿತು. ಸೌಲನ ಕೆಲವು ಪೂರ್ವಜರು ಈ ಪಟ್ಟಣದ ನಾಗರೀಕರಾಗಿರಬಹುದು.

ಯಾದವೀ ಕಲಹದ ಮೂರು ನೂರು ವರ್ಷಗಳ ತರುವಾಯ ಮತ್ತು ಅಂತರ್ವಿ ವಾಹದ ಸಮಯದಲ್ಲಿ, ಬೆನ್ಯಾಮಿನದ ಮುಖ್ಯ ಪಟ್ಟಣವಾದ ಗಿಬೆಯಕ್ಕೆ ಒಂದು ನಿಯೋ ಗವು ಬಂದಿತು. ಅಮ್ಮೋನಿಯನಾದ ನಾಹಾಶನ ಕೊನೆಯ ಎಚ್ಚರಿಕೆಗೆ ಭಯಪಟ್ಟು ಹತಾಶೆಯಿಂದ ಸಹಾಯಕ್ಕಾಗಿ ಹುಡುಕುತ್ತಿದ್ದರು. ಯಾಬೇಷ ಶರಣಾದರೆ, ನಾಹಾಶನು, ಪ್ರತಿಯೊಬ್ಬನ ಬಲಗಣ್ಣನ್ನು ಕಿತ್ತು ಬಿಡುವನು. ಈ ವಿರೂಪಗೊಳಿಸುವಿಕೆಯು, ಎಲ್ಲಾ ಪುರುಷರನ್ನು ಯುದ್ಧಕ್ಕೆ ಅನರ್ಹರನ್ನಾಗಿಸುತ್ತಿತ್ತು, ಯಾಕೆಂದರೆ ಅವರ ಎಡಗಣ್ಣು ಗುರಾಣಿ ಯಿಂದ ಮುಚ್ಚಲ್ಪಟ್ಟು ಕೇವಲ ಬಲಗಣ್ಣಿನಿಂದ ನೋಡುವದಕ್ಕೆ ಸಾಧ್ಯವಾಗಿತ್ತು. ಒಂದು ವೇಳೆ ಬಲಗಣ್ಣನ್ನು ಕಿತ್ತು ಬಿಟ್ಟರೆ, ಯೋಧರು ಯುದ್ಧದಲ್ಲಿ “ಕುರುಡರಾಗು ತ್ತಿದ್ದರು.” ಯಾಬೇಷ ಶರಣಾಗಲು ನಿರಾಕರಿಸಿದರೆ, ನಾಹಾಶನು ಪಟ್ಟಣವನ್ನು ಮುತ್ತಿಗೆ ಹಾಕಿ, ಅದರಲ್ಲಿದ್ದ ಎಲ್ಲರನ್ನು ನಾಶ ಮಾಡುತ್ತಿದ್ದನು.

ಸೌಲನಿಗೆ ಈ ಸುದ್ದಿಯು ತಿಳಿದಾಗ ಅವನಿಗೆ ದೇವರು ಧೈರ್ಯವನ್ನು ಕೊಟ್ಟನು ಮತ್ತು ಅವನು ಸೇನೆಯನ್ನು ಕೂಡಿಸಿದನು. ಜಯ ದೊರಕಿತು ಮತ್ತು ಇಸ್ರಾಯೇಲಿನ ಅರಸನಾಗಿ ಸೌಲ ಸ್ಥಾನವು ಸ್ಥಿರವಾಯಿತು.

ಯಾಬೇಷನ ಕತೆಯು ಇಲ್ಲಿಗೆ ಮುಗಿಯಲಿಲ್ಲ. ನಾಲ್ವತ್ತು ವರ್ಷಗಳು ಕಳೆದ ನಂತರ, ಸೌಲನ ಜಯಗಳು ಅವನ ಅಧಿಕಾರ, ಸ್ಥಾನ ಮತ್ತು ಮಾನ ಹೆಚ್ಚಿದಂತೆ ಹೆಚ್ಚಿದವು. ಮೊದಲಿದ್ದ ಅವನ ದೀನತೆಯು ಕುಂದಿತು ಮತ್ತು ಅವನು ಒಬ್ಬ ಮತಾಂಧ ನಿರಂಕುಶ ಪ್ರಭುವಾಗಿ ಕಾಣಿಸಿಕೊಂಡನು. ಗಿಲ್ಬೋವ ಬೆಟ್ಟದ ಮೇಲೆ ಸೌಲ ಮರಣವು ಬಂದಿತು. ಮತ್ತು ಅವನ ಮರಣವು ಫಿಲಿಷ್ಟಿಯರಿಗೆ ತಮ್ಮ ಅನ್ಯ ದೇವತೆಗಳಲ್ಲಿ ಆನಂದಿಸುವಂತೆ ಸಂಧರ್ಭ ಒದಗಿಸಿತು (31:6-10). ಸೌಲ ಮತ್ತು ಅವನ ಪುತ್ರರ ಶವಗಳನ್ನು ಹೊಲೆ ಮಾಡದಂತೆ ಯಾಬೇಷಿನವರು ನಿರಾಕರಿಸಿದರು. ಅವರು ಧೈರ್ಯದಿಂದ ಬೆತ್‌ಷೆಯಾನಿಗೆ ತೆರಳಿ, ದೇಹಗಳನ್ನು ತೆಗೆದು ಕೊಂಡರು ಮತ್ತು ಮರ್ಯಾದೆಯಿಂದ ಸುಟ್ಟುಬಿಟ್ಟರು (31:11-13). ಈ ಮಹತ್ತಾದ ಕೃತಜ್ಞತೆಯು, ಈ ಪಟ್ಟಣವನ್ನು ವಿಶಿಷ್ಟವಾ ಗಿಸುತ್ತದೆ!

## ಕೃತಜ್ಞತೆಯ ಭಾವ

ಯಾಬೇಷ-ಗಿಲ್ಯಾದಿನ ಈ ಧೀರ ನಾಗರಿಕರಿಂದ ನಾವು ಕೃತಜ್ಞತೆಯ ಈ ಕೆಳಗಿನ ಗುಣಗಳನ್ನು ಗಮನಿಸಬಹುದು.

*ಕೃತಜ್ಞತೆಯು ನೆನಪು ಮಾಡಿಕೊಳ್ಳುವದರಿಂದ ಹುಟ್ಟುತ್ತದೆ (11:11).* ಸೌಲನು ಯಾಬೇಷಿನವರಿಗೆ ಸಹಾಯ ಮಾಡಿ ಸುಮಾರು ನಾಲ್ವತ್ತು ದಿನಗಳು ಕಳೆದಿದ್ದವು, ಆದರೆ ಅವನ ಕೃತ್ಯಗಳು ಬಹು ಕಾಲದ ವರೆಗೆ ನೆನಪಿನಲ್ಲಿತ್ತು. ಇಂದು ಅನೇಕರು

ಕರುಣೆಯ ಕಾರ್ಯಗಳನ್ನು ಮರೆತು, ಕೇವಲ ತಪ್ಪುಗಳನ್ನು ಮಾತ್ರ ನೆನಪಿನಲ್ಲಿಡುತ್ತಾರೆ! ನಮ್ಮ ಒಳತಿಗಾಗಿ ಒಳ್ಳೆ ಕಾರ್ಯಗಳು ಮಾಡಲ್ಪಟ್ಟಿರುವಾಗ, ನಾವು "ಧನ್ಯವಾದ" ಹೇಳುವದಕ್ಕೆ ಮರೆಯಬಾರದು. ದಯಾಳುವಾದ ಸಹೋದರರು ನಮಗೆ ಸಹಾಯ ಮಾಡಿದಾಗ ಕೃತಜ್ಞತೆಯನ್ನು ವ್ಯಕ್ತಪಡಿಸಲೇ ಬೇಕು:

> ನಾನು ಹಗಲಿರುಳು ನನ್ನ ಪ್ರಾರ್ಥನೆಗಳಲ್ಲಿ ನಿನ್ನನ್ನು ತಪ್ಪದೇ ಜ್ಞಾಪಿಸಿಕೊಳ್ಳುತ್ತೇನೆ. ಇದಲ್ಲದೆ ನಾನು ಪೂರ್ವಿಕರ ಭಕ್ತಿ ಮಾರ್ಗವನ್ನೇ ಅನುಸರಿಸಿ ಒಳ್ಳೇ ಮನಸ್ಸಾಕ್ಷಿಯುಳ್ಳವನಾಗಿ ಆರಾಧಿಸುವ ದೇವರಿಗೆ ನಿನ್ನ ವಿಷಯವಾಗಿ ಸ್ತೋತ್ರ ಸಲ್ಲಿಸುತ್ತೇನೆ .... ನಿನ್ನಲ್ಲಿರುವ ನಿಷ್ಕಪಟವಾದ ನಂಬಿಕೆಯು ನನ್ನ ನೆನಪಿಗೆ ಬಂತು. ಆ ನಂಬಿಕೆಯು ನಿನ್ನ ಅಜ್ಜಿಯಾದ ಲೋಯಿಯಲ್ಲಿಯೂ ನಿನ್ನ ತಾಯಿಯಾದ ಯೂನೀಕೆಯಲ್ಲಿಯೂ ವಾಸವಾಗಿತ್ತು; ಹಾಗೆಯೇ ನಿನ್ನಲ್ಲಿಯೂ ವಾಸವಾಗಿದೆ ಎಂದು ದೃಢವಾಗಿ ನಂಬಿದ್ದೇನೆ (2 ತಿಮೊಥೆ 1:3, 5).

> ನಿಮಗೆ ದೇವರ ವಾಕ್ಯವನ್ನು ತಿಳಿಸಿದ ನಿಮ್ಮ ಸಭಾ ನಾಯಕರನ್ನು ಜ್ಞಾಪಕ ಮಾಡಿಕೊಳ್ಳಿರಿ; ಅವರು ಯಾವ ರೀತಿಯಾಗಿ ನಡೆದುಕೊಂಡು ಪ್ರಾಣ ಬಿಟ್ಟರೆಂಬದನ್ನು ಆಲೋಚಿಸಿರಿ. ಅವರ ನಂಬಿಕೆಯನ್ನು ಅನುಸರಿಸಿ (ಇಬ್ರಿಯ 13:7).

ದೇವರಿಂದ ನಮಗೆ ಸುಂದರವಾದ ಬಹುಮಾನಗಳು ದೊರೆತಾಗಲೂ ನಾವು ಕೃತಜ್ಞತೆ ಸಲ್ಲಿಸಬೇಕು:

> ಆದರೆ ಯೆಹೋವನಲ್ಲಿ ಭಯಭಕ್ತಿಯುಳ್ಳವರ ಮೇಲೆ ಆತನ ದಯವು ಯುಗಯುಗಾಂತರಗಳವರೆಗೂ ಇರುತ್ತದೆ. ಆತನ ನಿಬಂಧನೆಗಳನ್ನು ಕೈ ಕೊಂಡು ಆತನ ವಿಧಿಗಳನ್ನು ನೆನಪಿನಲ್ಲಿಟ್ಟುಕೊಂಡು ನಡೆಯುವವರ ಮಕ್ಕಳು ಮೊಮ್ಮಕ್ಕಳವರೆಗೂ ಆತನು ತನ್ನ ನೀತಿಯನ್ನು ಸಾಧಿಸುವನು (ಕೀರ್ತನೆ 103:17, 18).

> ಆತನು ಮಾಡಿದ ಮಹತ್ತನ್ನು, ಆತನ ಅದ್ಭುತ ಕಾರ್ಯಗಳು ಮತ್ತು ಆತನ ಬಾಯಿಯಿಂದ ಉಚ್ಚರಿಸಿದ ನ್ಯಾಯತೀರ್ಪುಗಳು ನೆನಪಿಸಿಕೊಳ್ಳಿರಿ (ಕೀರ್ತನೆ 105:6).

*ಕೃತಜ್ಞತೆಯಲ್ಲಿ ನಮ್ಮ ಪ್ರಯತ್ನವೂ ಒಳಗೊಂಡಿದೆ (31:12).* ಯಾಬೇಷಿನವರು ತಮ್ಮ ಜೀವವನ್ನು ಗಂಡಾಂತರಕ್ಕೆ ಒಳಪಡಿಸಿ ಮತ್ತು ತಮ್ಮ ಶಕ್ತಿಯಿಂದ ಸೌಲನ ದೇಹವನ್ನು ಪಡೆಯಲು ಮನಸ್ಸು ಮಾಡಿದರು. ಅವರು ಸ್ವತ್ಯಾಗದವರಾಗಿದ್ದರು. ಕೃತಜ್ಞತೆಯು ಯಾಕೆ ತೋರ್ಪಡುವದಿಲ್ಲ ಎಂಬುದಕ್ಕೆ ಪ್ರಥಮ ಕಾರಣ, ಸಹೋದರರು ಕೃತಜ್ಞತೆ ತೋರಿಸುವದಕ್ಕೆ ಪ್ರಯತ್ನ ಮಾಡುವದಿಲ್ಲ. ಕೃತಜ್ಞತೆಯು ತೋರ್ಪಡಬೇಕು!

*ಕೃತಜ್ಞತೆಯು ನಿರಂತರವಾಗಿರಬೇಕು, ಎಂದಿಗೂ ಶರತ್ತಿಗೊಳಪಡಬಾರದು (31:12).* ಸೌಲನ ಸಾರ್ವಜನಿಕ ರೂಪವು ಕಳಂಕಿತಗೊಂಡಿತು; ತನ್ನ ಜೀವನದ ಕೊನೆಯಲ್ಲಿ ಅವನು ಒಬ್ಬ ಹುಚ್ಚನೆಂದು ಗುರುತಿಸಲ್ಪಟ್ಟನು. ಮತಾಂಧತೆಯ ದಬ್ಬಾಳಿಕೆಯು ಅವನ ಸಭೆಯನ್ನು ಆಳಿತು. ಅರಸನೆಂದು ಪ್ರಾರಂಭದಲ್ಲಿ ಇದ್ದ ಉತ್ತುಂಗದಿಂದ ಅವನು ಬಿದ್ದನು. ಸೌಲನು ಮರಣ ಹೊಂದಿದನು, ಬಿಡಲ್ಪಟ್ಟನು, ಅಂಗಹೀನನಾಗಿ ಮಾಡಲ್ಪಟ್ಟನು ಮತ್ತು ಅನ್ಯರ ಹೀಯಾಳಿಕೆಗೆ ಬಲಿಯಾದನು. ಆದಾಗ್ಯೂ ಆ ಪಟ್ಟಣವು ಕೃತಜ್ಞತೆ ತೋರಿಸಿತು! ಕೃತಜ್ಞತೆಯು ಎಂದಿಗೂ ಒಬ್ಬ ವ್ಯಕ್ತಿಯ ಪ್ರತಿಷ್ಠೆಯ ಮೇಲೆ ಷರತ್ತುಳ್ಳದ್ದಾಗಿರಬಾರದು. ಒಬ್ಬನಲ್ಲಿ ಎದ್ದು ಕಾಣುವ ತಪ್ಪುಗಳಿದ್ದಾಗಲೂ, ಪ್ರಶಂಸೆಯನ್ನು ವ್ಯಕ್ತಪಡಿಸಬೇಕು. ಒಬ್ಬನು ಇನ್ನೊಬ್ಬನಿಗೆ "ಹಿಡಿಸಲಿಲ್ಲ

ವೆಂಬ" ಒಂದೇ ಕಾರಣದಿಂದ ಕೃತಜ್ಞತೆಯನ್ನು ವ್ಯಕ್ತಪಡಿಸದೇ ಇರುವದು ದುಃಖಕರವಾಗಿದೆ.

*ಕೃತಜ್ಞತೆಯು ಪರಿಪೂರ್ಣವಾಗಿರಬೇಕು (31:12ಬಿ, 13).* ಯಾಬೇಷಿನವರು ತಮಗೆ ತಿಳಿದದ್ದೆಲ್ಲವನ್ನೂ ಮಾಡಿದರು. ನಾವು ಕೃತಜ್ಞತೆ ವ್ಯಕ್ತಪಡಿಸುವಲ್ಲಿ ಅಷ್ಟೇ ಪರಿಪೂರ್ಣರಾಗಿರೋಣ. "ಅಲ್ಪ" ಪ್ರಯತ್ನಸಾಕಾಗುವದಿಲ್ಲ.

*ಕೃತಜ್ಞತೆಯು ಮೃದುವಾದ ಪ್ರೇಮವನ್ನು ವ್ಯಕ್ತಪಡಿಸುತ್ತದೆ (31:13).* ಈ ನಾಗರೀಕರು ಸೌಲನ ಮಣದಲ್ಲಿ ದುಃಖ ವ್ಯಕ್ತಪಡಿಸಿದರು. ಅವರಿಗೆ ಅವನ ಮೇಲೆ ಬಹು ಪ್ರೀತಿ ಇತ್ತು. ಆಳವಾದ ಭಾವನಾತ್ಮಕ ಸಂಬಂಧ ಸ್ಪಷ್ಟವಾಗಿತ್ತು. ಕೃತಜ್ಞತೆಯು ಪ್ರೀತಿಯನ್ನೂ ಮತ್ತು ಆಳವಾದ ಭಾವನಾತ್ಮಕ ಬಂಧವನ್ನೂ ಪ್ರಕಟಿಸುತ್ತದೆ (ಹೋಲಿಸು. ಫಿಲಿಪ್ಪಿ 4:18). ಕ್ರೈಸ್ತರು ತಮ್ಮ ಹೃದಯಗಳಲ್ಲಿ ಪ್ರೀತಿಯಿರುವದರಿಂದ ಕೃತಜ್ಞತೆ ವ್ಯಕ್ತಪಡಿಸ ಬೇಕು (1 ಯೋಹಾನ 4:19-21).

*ಕೃತಜ್ಞತೆಯು ತಕ್ಷಣದ್ದಾಗಿದೆ (31:12).* ಯಾವ ವಿಶಿಷ್ಟ ಬೇಡಿಕೆ ಇರಲಿಲ್ಲ. ಯಾವ ಪ್ರತಿಫಲ ನಿರಕ್ಷಿಸಲಿಲ್ಲ. ಯಾವ ಪ್ರೇರಣೆ ಅಥವಾ ಒತ್ತಾಯವಿಲ್ಲದೇ ಜನರು ಕಾರ್ಯ ಮಾಡಿದರು. ಇದು ಕೃತಜ್ಞತೆಯ "ಗುರುತಾಗಿದೆ." ಕೃತಜ್ಞತೆಯನ್ನು ತೋರಿಸಲು ಒಬ್ಬರು ಪ್ರಚೋದಿಸಲ್ಪಟ್ಟಾಗ ಅಥವಾ ಒತ್ತಾಯಿಸಲ್ಪಟ್ಟಾಗ ಅದರ ಉತ್ಸಾಹವೇ ಕಳೆದು ಹೋಗುತ್ತದೆ. ಒತ್ತಾಯಿಸಲ್ಪಟ್ಟ ಕೃತಜ್ಞತೆಯಲ್ಲಿ, ಪ್ರೀತಿಯು ಅದರ ಮೂಲ ಉದ್ದೇಶವಾ ಗಿರುವದಿಲ್ಲ ಮತ್ತು ದೇವರು ಅದನ್ನು ಮೆಚ್ಚುವದಿಲ್ಲ!

ಅವರ ಕೃತಜ್ಞತೆಯು ಕೇವಲ ಪ್ರೀತಿಯಿಂದ ಪ್ರೇರೇಪಿಸಲ್ಪಟ್ಟಿತ್ತು ಮತ್ತು ಸೇವೆಯ ಮೂಲಕ ಅದು ನಿರೂಪಿಸಲ್ಪಟ್ಟಿತು.

## ಖಚಿತವಾದ ಒಂದು ಅಮೂಲ್ಯ ಪಾಠ

ಈ ಐತಿಹಾಸಿಕ ಕತೆಯಿಂದ ಕೃತಜ್ಞತೆಯ ಒಂದು ಪ್ರಾಮುಖ್ಯ ಅಂಶ ನಮಗೆ ತೋರಿಸಲ್ಪಟ್ಟಿದೆ - ಅದು ಮೌನವಾಗಿದ್ದು ಹೊರಬರದಿದ್ದರೆ, ಅದು ಉಪಯೋಗವಿಲ್ಲದ್ದು!

1860ರಲ್ಲಿ ಮಿಶಿಗನ್ ನದಿಯಲ್ಲಿ ಒಂದು ಬಿರುಗಾಳಿಯ ರಾತ್ರಿಯಲ್ಲಿ, ಒಂದು ಕಟ್ಟಿಗೆ ಸಾಗಿಸುವ ವೇಗವಾಗಿ ಚಲಿಸುವ ನೌಕೆಯು ಹಬೆಯಿಂದ ನಿಯಂತ್ರಿತವಾದ ನಾವೆಗೆ ಬಡಿಯಿತು. ನಾವೆಯು ವಿನೆಕ್ಟಾ, ಇಲಿನೊಯ್‌ನಿಂದ ಒಂದು ಮೈಲು ದೂರದಲ್ಲಿ ಮುಳುಗಿದಾಗ, ಅದರಲ್ಲಿದ್ದ 393 ಯಾತ್ರಿಕರಲ್ಲಿ, 279 ಮುಳುಗಿದರು. ಆ ದುರಂತದಲ್ಲಿ ವೀರನೆಂದು ಹೆಸರುಗೊಂಡವನು ಎಡ್ವರ್ಡ್ ಸ್ಪೆನ್ಸೆರ್, ನಾರ್ಥ್‌ವೆಸ್ಟರ್ನ್ ವಿಶ್ವವಿದ್ಯಾಲಯದ ಒಬ್ಬ ವಿದ್ಯಾರ್ಥಿ. ಏನಾಯಿತು ಎಂದು ತಿಳಿದ ತಕ್ಷಣವೇ, ಸ್ಪೆನ್ಸರ್ ಮಿಶಿಗನ್ ನದಿಯ ತಣ್ಣಗಿನ ನೀರಿನಲ್ಲಿ ಜಿಗಿದರು. ಮುಳುಗುತ್ತಿದ್ದ ಯಾತ್ರಿಕರ ಸಮೀಪಕ್ಕೆ ಈಜಿಕೊಂಡು ಹೋದರು. ಒಬ್ಬರನ್ನು ದಂಡೆಗೆ ಎಳೆದುಕೊಂಡು ಹೋಗಿ ಮತ್ತೆ ಇನ್ನೊಬ್ಬರಿಗಾಗಿ ಹಿಂತಿರುಗಿದರು. ಆ ರಾತ್ರಿ ಸ್ಪೆನ್ಸರ್ ಒಬ್ಬೊಂಟಿಗರಾಗಿ ಹದಿನೇಳು ಜನರನ್ನು ಉಳಿಸಿದರು. ಆದರೆ ಅವರ ಈ ಶೂರತನಕ್ಕೆ ಒಂದು ದೊಡ್ಡ ಬೆಲೆ ತೆತ್ತರು. ಶ್ರಮೆಯ ಫಲವಾಗಿ ಅವರು ತೀವ್ರ ಜ್ವರದಿಂದ ಬಳಲಿದ್ದರಿಂದ ತಮ್ಮ ಬದುಕುಳಿದ ದಿನಗಳಲ್ಲಿ ಗಾಲಿ ಕುರ್ಚಿಯಲ್ಲಿ ಕಳೆಯಬೇಕಾಯಿತು. ತಮ್ಮ ಹದಿನೆಂಟನೇಯ ಹುಟ್ಟಿದ ದಿನದಂದು, ಆ ದಿನದ ಮರೆಯಲಾರದ ಒಂದು ನೆನಪಿನ ಕುರಿತು ಒಬ್ಬರು ಕೇಳಿ ದರು. ಆಗ ಅವರು - "ಆ ಹದಿನೇಳು ಜನರಲ್ಲಿ ಒಬ್ಬರೂ ನನಗೆ ಕೃತಜ್ಞತೆ ಹೇಳಲು ಬರಲಿಲ್ಲ" ಎಂದರು.

ಇತರರಿಗೆ ಕೃತಜ್ಞತೆ ಸಲ್ಲಿಸುವದರಲ್ಲಿ ಸಾಮಾನ್ಯವಾಗಿ ನಾವು ವಿಫಲರಾಗಿದ್ದೆವೆಂದು ಒಪ್ಪಿಕೊಳ್ಳೋಣ. ನಾವು ಅನೇಕ ವೇಳೆ ಕೃತಜ್ಞರಾಗಿರುತ್ತೇವೆ ಮತ್ತು ವ್ಯಕ್ತಪಡಿಸಲು ಆಶಿಸುತ್ತೇವೆ, ಆದರೆ ಮೌನವಾಗಿರುತ್ತೇವೆ ಮತ್ತು ಕೃತಜ್ಞತೆಯನ್ನು ಸಲ್ಲಿಸಲಿಲ್ಲವೆಂದು

ಅಂದುಕೊಳ್ಳುತ್ತೇವೆ!

ಇತರರು ನಮಗೆ ಮಾಡಿದ ಒಳ್ಳೆದನ್ನು ನೆನಪು ಮಾಡಿಕೊಳ್ಳಲು ನಿರ್ಧರಿಸೋಣ ಮತ್ತು ನಮಗೆ ಒಳ್ಳೆದನ್ನು ಮಾಡಿರುವ ಎಲ್ಲರಿಗೆ ಕೃತಜ್ಞರಾಗಿರೋಣ. ಮೊದಲಿಗೆ, ದೇವರಿಗೆ ಕೃತಜ್ಞತೆ ಸಲ್ಲಿಸಲು ಮರೆಯದಿರೋಣ:

> ಯೆಹೋವನ ಮಹೋಪಕಾರಕ್ಕಾಗಿ ಆತನಿಗೆ ಹಾಡುವೆನು (ಕೀರ್ತನೆ 13:6).

> ಯೆಹೋವನು ನನಗೆ ಬಲವೂ ಗುರಾಣಿಯೂ ಆಗಿದ್ದಾನೆ; ನಾನು ಆತನಲ್ಲಿ ಭರವಸೆಯಿಟ್ಟೆನು, ನನಗೆ ಸಹಾಯವು ಉಂಟಾಯಿತು. ಆದಕಾರಣ ನನ್ನ ಹೃದಯವು ಹರ್ಷಿಸುವದು; ಕೀರ್ತನಾರೂಪವಾಗಿ ಆತನನ್ನು ಸ್ತುತಿಸುವೆನು (ಕೀರ್ತನೆ 28:7).

ನಮ್ಮ ಕುಟುಂಬದವರಿಗೆ ಕೃತಜ್ಞತೆ ಸಲ್ಲಿಸೋಣ (ಉದಾಹರಣೆ, ತಂದೆ ತಾಯಿಗಳು, ಮಕ್ಕಳು ಮತ್ತು ಅಜ್ಜ ಅಜ್ಜಿ); ದೇವರ ಕುಟುಂಬದವರು, ಸಭೆ; ಮತ್ತು ಒಳ್ಳೆದನ್ನು ಮಾಡುತ್ತಿರುವ ನಮ್ಮ ಸಮಾಜದ ಜನರು.

## ಮುಕ್ತಾಯ

ಕೃತಜ್ಞತೆಯು ಒಂದು ನೈತಿಕ ಹೊಣೆಯಾಗಿದೆ. ಅದನ್ನು ವ್ಯಕ್ತಪಡಿಸಬೇಕು. ಕೃತಜ್ಞತೆ ವ್ಯಕ್ತಪಡಿಸುವಲ್ಲಿ ವಿಫಲರಾದರೆ ಅದು ಪಾಪ. ಯಾಬೇಷಿನ ಕೃತಜ್ಞತೆಯನ್ನು ಬೆಳೆಸಿಕೊಂಡರೆ, ನೀವು ಆನಂದದಿಂದ ತುಂಬಿದ ಉತ್ತಮ ವ್ಯಕ್ತಿಯಾಗುತ್ತೀರಿ; ಜೀವನವನ್ನು ಆನಂದಿಸುತ್ತೀರಿ; ನಿಮಗೆ ಇನ್ನೂ ಹೆಚ್ಚಿನ ಸ್ನೇಹಿತರಿರುತ್ತಾರೆ; ಇತರರು ನಿಮಗಾಗಿ ಎಷ್ಟು ಮಾಡುತ್ತಾರೆಂದು ಗುರುತಿಸುತ್ತೀರಿ; ಮತ್ತು ನೀವೂ ಸೇವೆಯಲ್ಲಿ ಮುಳುಗಿ ನಿಜವಾದ ಆನಂದವನ್ನು ಪಡೆಯುತ್ತೀರಿ!

ಎಷ್ಟೋ ಜನರಿಂದ ಎಷ್ಟೋ ಸಂಗತಿಗಳನ್ನು ಪಡೆದುಕೊಂಡು ಅವರ ಒಳ್ಳೆತನಕ್ಕೆ ವಂದನೆ ಸಲ್ಲಿಸದಿದ್ದರೆ ಎಷ್ಟು ದುಃಖಕರವಾಗಿದೆ! ಕೃತಜ್ಞತೆ ಸಲ್ಲಿಸಲು ಮರೆಯಬೇಡಿರಿ. ಈ ವಾರ ಅದನ್ನು ಮಾಡಿರಿ! (1 ಥೆಸಲೊನೀಕ 5:18).